ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ನಮ್ಮ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ತೆ ರ್ಗಡೆಯಾದ ಇಂಜಿನಿಯರಿಂಗ್ ಪದವೀಧರರ ಸಂಖ್ಯೆ ಕೆಳಕಂಡಂತೆ ಇದೆ:

೧) ೧೯೮೫–೫.೩೯೧.
೨) ೧೯೮೬–೫.೫೯೧.
೩) ೧೯೮೭–೫,೩೬೬.

ಆ) ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಲ್ಲಿ ನೋಂದಾಯಿಸಿರುವವರ ಪೈಕಿ ೧೯೮೫–೮೬ ರಿಂದ ಉದ್ಯೋಗ ಪಡೆದಿರುವ ಪದವೀಧರರ ಸಂಖ್ಯೆ ಕೆಳಕಂಡಂತೆ ಇದೆ:

೧) ೧೯೮೫–೮೫–೧೫೧.
೨) ೧೯೮೬–೮೭–೨೭೮.
೩) ೧೯೮೭–೮೮–೨೯.

ಇದೂ ಅಲ್ಲದೆ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಲ್ಲಿ ನೋಂದಾಯಿಸದೆ ಇರುವ ಅನೇಕ ಪದವೀಧರರಿಗೆ ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ಉದ್ಯೋಗಗಳು ದೊರಕಿರಬಹುದು. ಈ ಮಾಹಿತಿ ಸಧ್ಯಕ್ಕೆ ಲಭ್ಯವಿರುವುದಿಲ್ಲ.

ಇ) ೧೯೮೫–೮೬ನೇ ಸಾಲಿನಲ್ಲಿ ಯಾವುದೇ ಹೊಸ ಇಂಜಿಯರಿಂಗ್ ಕಾಲೇಜು ಪ್ರಾರಂಭಿಸ ಲಾಗಿಲ್ಲ. ೧೯೮೬–೮೭ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ೬ ಖಾಸಗಿ ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಿದೆ. ೧೯೮೭–೮೮ನೇ ಸಾಲಿನಲ್ಲಿ ಯಾವುದೇ ಹೊಸ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲಾಗಿಲ್ಲ ಮತ್ತು ೧೯೮೮-೮೯ನೇ ಸಾಲಿನಲ್ಲಿ ೨ ಇಂಜಿನಿಯರಿಂಗ್ ಕಾಲೇಜುಗಳನ್ನು ಖಾಸಗಿಯವರು ಪ್ರಾರಂಭಿಸಲು ಸರ್ಕಾರ ಕೆಲವು ಷರತ್ತುಗಳ ಮೇಲೆ ಉದ್ದೇಶಿತ ಪತ್ರವನ್ನು ನೀಡಲಾಗಿದೆ.

ಗುತ್ತಿಗೆ ಶಿಕ್ಷಕರ ಬಗ್ಗೆ

೧೪೭೫ (೩೦೮೬) ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ರಾಜ್ಯ ಶಿಕ್ಷಣ ಇಲಾಖೆಯಲ್ಲಿ ಪ್ರಸ್ತುತ ಇರುವ ಗುತ್ತಿಗೆ ಶಿಕ್ಷಕರ ಸಂಖ್ಯೆ ಎಷ್ಟು ? ಸಾರ್ವ ಜನಿಕ ಶಿಕ್ಷಣ ಇಲಾಖೆ ಸೇರಿ ವಿವರ ನೀಡುವುದು ?

ಆ) ಅವರೆಲ್ಲರ ಶೈಕ್ಷಣಿಕ ಅರ್ಹತೆ ಯಾವ ಹಂತದಲ್ಲಿದೆ ?

ಇ) ಸದರಿ ಶಿಕ್ಷಕರೆಲ್ಲರನ್ನು ಯಾವಾಗ ಖಾಯಂ ಮಾಡಲಾಗುವುದು ?

ಈ) ಇವರಿಗೆ ಬೇಸಿಗೆ ರಜದಲ್ಲಿ ಸಂಬಳ ನೀಡಲಾಗಿದೆಯೇ ? ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಪ್ರಾಥಮಿಕ ಶಾಲಾ ಶಿಕ್ಷಕರು ೩೫೫೪.
ಪ್ರೌಢಶಾಲಾ ಶಿಕ್ಷಕರು ೩೫೬೫.
ಉಪನ್ಯಾಸಕರು ೮೫೨.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) (ಅ) ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಈ) ಬೇಸಿಗೆ ರಜಾ ವೇತನ ನೀಡಲಾಗಿದೆ.